

ಡಾ|| ವಾಮನ್ ಆಚಾರ್ಯ
ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ಸ್ವತಂತ್ರ ಭಾರತಕ್ಕಾಗಿ ಗಣಪನೂ ಹೋರಾಡಿದ್ದಾನೆ!**

# ಮಾಲಿನ್ಯ ಮುಕ್ತ ನಾಡಿಗಾಗಿ ಗಣೇಶನನ್ನು ಪ್ರಾರ್ಥಿಸೋಣ

## ಗಣೇಶ ಹಬ್ಬದಲ್ಲಿ ಪರಿಸರ ಸಂರಕ್ಷಣೆಯ ನಿಯಮಗಳನ್ನು ತಪ್ಪದೆ ಪಾಲಿಸೋಣ.

ಗಣೇಶ ಉತ್ಸವಗಳು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಮುಖ್ಯ ಭೂಮಿಕೆಯನ್ನು ಮರೆಯಲಾದೀತೆ? ಲೋಕಮಾನ್ಯ ತಿಲಕರ ಪರಿಕಲ್ಪನೆಯು ದೇಶಾಭಿಮಾನದ ಕಿಡಿ ಹೊತ್ತಿಸಿತು. ಈಗ 67ನೆಯ ಸ್ವಾತಂತ್ರ್ಯೋತ್ಸವ ಬಂದಿದೆ. ಬನ್ನಿ, ನಾವೆಲ್ಲರೂ ಗಣೇಶನ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ.

### ನಿಮ್ಮೆಲ್ಲರಲ್ಲಿ ಸವಿನಯ ಪ್ರಾರ್ಥನೆ

**ಹಬ್ಬದ ಶುಭಗಳಿಗೆಯಲ್ಲಿ ವಿಷದ ಬಳಕೆ ಬೇಡ**

- ವಿಷಕಾರಿ ರಾಸಾಯನಿಕ, ಲೋಹದ ಲೇಪದಿಂದ ಕೂಡಿದ ಗಣೇಶನ ಮೂರ್ತಿಯನ್ನು ಸ್ಥಾಪನೆ ಮಾಡಬೇಡಿ. ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಕೆಯೂ ಅತ್ಯಂತ ಅಪಾಯಕಾರಿ. ಬದಲಿಗೆ ಸಾದಾ ಜೇಡಿ ಮಣ್ಣಿನ ಮುದ್ದಾದ ಗಣೇಶ ವಿಗ್ರಹವನ್ನು ಸ್ಥಾಪಿಸಿ. ಮಣ್ಣಿನ ಮೂರ್ತಿಗೆ ದೇಸಿ ಸೊಗಡಿರುತ್ತದೆ. ಗಿಡ, ಹೂವುಗಳಿಂದ ಸಂಸ್ಕರಿಸಿ ತೆಗೆದ ನೈಸರ್ಗಿಕ ಬಣ್ಣಗಳನ್ನು ಹಚ್ಚಿದರೆ ಅದರ ಸೌಂದರ್ಯವೇ ಬೇರೆ!

**ಗಣೇಶನನ್ನು ವಿಸರ್ಜನೆ ಮಾಡೋಣ, ಕಸವನ್ನು ವಿಲೇವಾರಿ ಮಾಡೋಣ**

- ಚಿಕ್ಕ ಗಾತ್ರದ ಗಣಪತಿಯನ್ನೇ ಆಯ್ಕೆ ಮಾಡಿಕೊಂಡು ಸಾಂಕೇತಿಕವಾಗಿ ಹಬ್ಬ ಆಚರಿಸಿ. ಗಣಪತಿ ವಿಸರ್ಜನೆಯನ್ನು ಬಾವಿ, ಕೆರೆ, ಹೊಳೆಗಳಲ್ಲಿ ಮಾಡಬೇಡಿ. ಅಂತರ್ಜಲ, ಕುಡಿಯುವ ನೀರಿನ ಸೆಲೆ – ಎಲ್ಲವೂ ಮಲಿನವಾಗುವುದಕ್ಕೆ ನೀವೇ ಅವಕಾಶ ಮಾಡಿಕೊಡಬೇಡಿ. ಬದಲಿಗೆ ಮನೆಯಲ್ಲೇ, ಬಕೆಟ್‌ನಲ್ಲಿ ಮೂರ್ತಿಯನ್ನು ವಿಸರ್ಜಿಸಿ. ಅಧಿಸೂಚಿತ ಕೆರೆಗಳಲ್ಲಿ ವಿಸರ್ಜಿಸುವ ಮುನ್ನ ಹೂವು, ವಸ್ತ್ರ, ಪ್ಲಾಸ್ಟಿಕ್ ರೂಪಿತ ಹಾರ ಮುಂತಾದ ಅಲಂಕಾರಿಕ ವಸ್ತುಗಳನ್ನು ತೆಗೆಯಿರಿ. ಅವೂ ಹಲವಾರು ವಿಷಕಾರಿ ವಸ್ತುಗಳಿಂದ ಕೂಡಿರುತ್ತವೆ.
- ಗಣಪತಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸಬೇಡಿ. ಪಟಾಕಿ ಎಂದರೆ ಶಬ್ದ ಮಾಲಿನ್ಯ, ಕಸ ಮತ್ತು ವಾಯು ಮಾಲಿನ್ಯದ ಪ್ರಮುಖ ಕಾರಣ ಎಂಬುದನ್ನು ಮರೆಯಬೇಡಿ. ಪಟಾಕಿಯಲ್ಲಿರುವ ರಾಸಾಯನಿಕಗಳ ಹೊಗೆ ಸೇವನೆ ಅತ್ಯಂತ ಅಪಾಯಕಾರಿ.

**ಪಟಾಕಿಯ ಬಳಕೆಯಿಂದ ಗಾಳಿಯೂ ವಿಷ, ರಸ್ತೆಗೂ ಕಸ, ಹಲವರಿಗೆ ಪ್ರಯಾಸ**

- ಗಣೇಶ ಹಬ್ಬದಲ್ಲಿ ರಸ್ತೆ, ಚರಂಡಿಯಲ್ಲಿ ಹೂವಿನ ಹಾರದ ರಾಶಿ, ಬಳಸಿ ಎಸೆದ ತಟ್ಟೆ, ಲೋಟ, ಎಲೆಗಳ ರಾಶಿ, ತ್ಯಾಜ್ಯ ಆಹಾರದ ರಾಶಿಗೆ ನಾವು ಕಾರಣರಾಗುವುದು ಬೇಡ. ನಮ್ಮ ನೆರೆಹೊರೆಯನ್ನು, ರಸ್ತೆ, ಫುಟ್‌ಪಾತ್‌ಗಳನ್ನು ಚೊಕ್ಕಟವಾಗಿ ಇಟ್ಟುಕೊಳ್ಳೋಣ.
- ಗಣೇಶನ ಹಬ್ಬದಲ್ಲಿ ವಾರಗಟ್ಟಳೆ ಮೈಕ್ ಮೂಲಕ ಗಟ್ಟಿಯಾಗಿ ಹಾಡು ಹಾಕುವುದು, ಆರ್ಕೆಸ್ಟ್ರಾ ಮಾಡುವುದನ್ನು ತಪ್ಪಿಸಿ; ಶಬ್ದ ಮಾಲಿನ್ಯದಿಂದ ವಯೋವೃದ್ಧರು, ರೋಗಿಗಳಿಗೆ, ಹಸುಗೂಸುಗಳಿಗೆ ಯಾತನೆಯಾಗುತ್ತದೆ; ನಮಗೇ ಅರಿವಿಲ್ಲದಂತೆ ಕಿವಿಯು ಹಾಳಾಗುತ್ತ ಹೋಗುತ್ತದೆ.

**ನಮ್ಮ ವೀರ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯಾಗಿದ್ದ ಗಣೇಶ ನಮ್ಮ ಪರಿಸರ ಸಂರಕ್ಷಣೆಯ ಜೀವನಶೈಲಿಗೂ ಖಂಡಿತ ಆಶೀರ್ವಾದ ನೀಡುತ್ತಾನೆ. ಭಕ್ತಿ – ಭಾವದ ಜೊತೆಗೆ ಪರಿಸರದ ಪಾಠವನ್ನೂ ಅನುಸರಿಸೋಣ.**

ಮಾಲಿನ್ಯ ನಿಯಂತ್ರಣ ಮಂಡಳಿ
ಕರ್ನಾಟಕ

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು www.kspcb.gov.in

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು 560001